ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 12, ಸನ 1903.

IIನೇ ಭಾಗ.

ಇಂಡ್ಯನ ಗವರ್ನಮೆಂಟ, ರೆಸಿಡೆಂಟರು, ಜೀಲ್ಲಾ ಜಡ್ಜ್‌ರು ಮಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ.

ಸನ 1903ನೇ ಇಸವಿ ಜನವರಿ 22ನೇ ತಾರೀಖಿನ ಡಿ. ನಂಬರು 59.

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ಇದರಿಂದ ತಿಳಿಯುಪಡಿಸುವದೇನಂದರೆ, ಇಂಗ್ಲಿಷ್ ಸ್ವಂತ ವ್ಯಾಸಂಗಿಗಳಿಗೆ, ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಸಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗೆ ಮತ್ತು ಎಲ್ಲಾ ಪರೀಕ್ಷ್ಯೆಯರಿಗೆ ವಿನಹ ಮಿಕ್ಕ ಎಲ್ಲಾ ಲೋವರ್ ಸೆಕಂಡರಿ ಪರೀಕ್ಷ್ಯರಿಗೆ ಪರೀಕ್ಷಾ ವೇತನವು 8 ಆಣೆಯಂತೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಪರೀಕ್ಷಾ ವೇತನವು ಇದರಡೀ ಕಂಡಂತೆ ಈ ಲಾಗಾಯಿತು ನಿಯಮಿಸಲ್ಪಟ್ಟಿರುತ್ತೆ :—

		ರೂ. ಆ. ಪೈ.
(1)	ಇಂಗ್ಲಿಷನ್ನು ತನ್ನ ಅವಶ್ಯಕ ಭಾಷೆಯಾಗಿ ತೆಗದುಕೊಳ್ಳುವಂಥಾ ಸರ್ಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯನಿಗಾಗಲಿ ಅಥವಾ ಪರೀಕ್ಷಾ ರೂಲ್ಸಿನ ಎರಡನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ವಿದ್ಯಾರ್ಥಿಗಾಗಲಿ.	5—0—0
(2)	ಇತರ ಎಲ್ಲಾ ವಿದ್ಯಾರ್ಥಿಗಳಿಗೂ ಮತ್ತು ಸರ್ಕಾರದ ಅಥವಾ ದ್ರವ್ಯಸಹಾಯದ ಪಾಠಶಾಲೆಯ ಉಪಾಧ್ಯಾಯರುಗಳಿಗೂ.	4—0—0
(3)	ಇಂಗ್ಲಿಷನ್ನು ಅವಶ್ಯಕ ಭಾಷೆಯಾಗಿ ತೆಗೆದುಕೊಂಡು ಸ್ವಂತ ವ್ಯಾಸಂಗ ಮಾಡುವಂಥಾವರಿಗೆ.	10—0—0
(4)	ಇತರ ಎಲ್ಲಾ ಸ್ವಂತ ವ್ಯಾಸಂಗಿಗಳಿಗೆ	5—0—0
(5)	ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಸಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶ ಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗು ಮತ್ತು ಎಲ್ಲಾ ಪರೀಕ್ಷ್ಯೆಯರಿಗೂ.	2—8—0

ಹೆಚ್. ಜೆ. ಭಾಭಾ,

ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್, ಮೈಸೂರು.